ಸಂದರ್ಶನ: **ಆಲ್ಫ್ರೆಡ್ ಮಕಾಡಮ್**
ಕನ್ನಡಕ್ಕೆ: **ಹೇಮಾ ಎಸ್.**

ಲ್ಯಾಟಿನ್ ಅಮೆರಿಕದ ಬಹುಮುಖ್ಯ ಕವಿ ಅಕ್ಟೇವಿಯಾ ಪಾಜ್ (1914–1998) ಮೆಕ್ಸಿಕೊ ನಗರದಲ್ಲಿ ಜನಿಸಿದ. ತನ್ನ ಹದಿನೇಳನೆಯ ವಯಸ್ಸಿನಿಂದಲೇ ಬರೆಯಲು ಆರಂಭಿಸಿದ. ಎರಡನೆಯ ಮಹಾಯುದ್ಧದ ಅನಂತರ ಮೆಕ್ಸಿಕನ್ ರಾಯಭಾರ ಸೇವೆಗೆ ಸೇರಿದ. ವಿವಿಧ ದೇಶಗಳು, ಸಂಸ್ಕೃತಿಗಳ ನಿಕಟ ಪರಿಚಯ ಪಾಜ್‌ನ ಕಾವ್ಯಶ್ರೀಮಂತಿಕೆಯನ್ನು ಹೆಚ್ಚಿಸಿತು. ಸರ್ರಿಯಲಿಸಂ, ಮಾರ್ಕ್ಸ್‌ವಾದ, ಅಸ್ತಿತ್ವವಾದ, ಬೌದ್ಧಧರ್ಮ ಹಾಗೂ ಹಿಂದೂಧರ್ಮದ ಪ್ರಭಾವವನ್ನು ಆತನ ಕಾವ್ಯದಲ್ಲಿ ಗುರುತಿಸಲಾಗುತ್ತದೆ. ಕಾವ್ಯ, ಮನುಷ್ಯನ ಆಧ್ಯಾತ್ಮಿಕ ಔನ್ನತ್ಯಕ್ಕೆ ಹಾಗೂ ಸಮಾಜದ ಒಳಿತಿಗೆ ಅತ್ಯಂತ ಅವಶ್ಯಕ ಎನ್ನುವುದು ಅವನ ಗಾಢ ನಂಬಿಕೆಯಾಗಿತ್ತು. ಮೆಕ್ಸಿಕನ್ ಸಂಸ್ಕೃತಿ ಹಾಗೂ ಆ ನಗರದ ಬದುಕಿನ ಚಿತ್ರಣವನ್ನು ತನ್ನ ಕೃತಿಗಳಲ್ಲಿ ಕಟ್ಟಿಕೊಟ್ಟಿದ್ದಾನೆ.

1962ರಲ್ಲಿ ಭಾರತಕ್ಕೆ ರಾಯಭಾರಿಯಾಗಿ ಬಂದ ಪಾಜ್‌ಗೆ ಪೂರ್ವ ದೇಶಗಳು, ಬೌದ್ಧಧರ್ಮದ ಬಗ್ಗೆ ಅಪರಿಮಿತ ಪ್ರೀತಿ, ಅಭಿಮಾನ. ಅದು ತನ್ನ ಬದುಕು ಹಾಗೂ ಕಾವ್ಯಜೀವನದ ಮಹತ್ವದ ಕಾಲ ಎಂದು ಹೇಳಿಕೊಳ್ಳುತ್ತಾನೆ. ಮೆಕ್ಸಿಕೊದಲ್ಲಿನ ವಿದ್ಯಾರ್ಥಿ ಪ್ರತಿಭಟನೆಯನ್ನು ಸರ್ಕಾರ ಹತ್ತಿಕ್ಕಿದ್ದನ್ನು ಖಂಡಿಸಿ ತನ್ನ ಹುದ್ದೆಗೆ ರಾಜೀನಾಮೆ ನೀಡುತ್ತಾನೆ. ಕೆಲವು ಕಾಲ ಹಾರ್ವರ್ಡ್, ಟೆಕ್ಸಾಸ್, ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕನಾಗಿ ಕೆಲಸಮಾಡುತ್ತಾನೆ. ಅನಂತರ 'Plural', 'Vuelta' ಎನ್ನುವ ಪತ್ರಿಕೆಗಳನ್ನು ಆರಂಭಿಸಿ ನಡೆಸುತ್ತಾನೆ. ಅವನಿಗೆ ಹಲವು ಪುರಸ್ಕಾರಗಳು ಸಂದಿವೆ. ಮೆಕ್ಸಿಕೊ, ಹಾರ್ವರ್ಡ್ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿವೆ. 1963ರಲ್ಲಿ ಗ್ರಾಂಡ್‌ಪಿಕ್ಸ್, 1977ರಲ್ಲಿ ಜರೂಸಿಲಮ್ ಹಾಗೂ 1990ರಲ್ಲಿ ನೊಬೆಲ್ ಪುರಸ್ಕಾರ ಲಭಿಸಿದೆ.

ಕಾವ್ಯವಲ್ಲದೆ ಹಲವಾರು ಪ್ರಬಂಧಗಳು, ಕಾವ್ಯಮೀಮಾಂಸೆ, ಸಾಹಿತ್ಯ, ಕಲೆ ವಿಮರ್ಶೆ, ಮೆಕ್ಸಿಕನ್ ಇತಿಹಾಸ, ರಾಜಕೀಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಕೃತಿಗಳನ್ನು ರಚಿಸಿದ್ದಾನೆ. ಅನುವಾದಗಳನ್ನು ಸಹ ಮಾಡಿದ್ದಾನೆ.

ಆತನ ಕೆಲವು ಕೃತಿಗಳು: **Sun stone, The Monkey Grammarian, Salamandra, Toward the begning, The Labyrinth of Solitude, Blanco, A Draft of Shadows.**

ಕನ್ನಡದಲ್ಲಿ ಕೆ.ಎನ್. ವಿಜಯಲಕ್ಷ್ಮಿಯವರು ಅಕ್ಟೇವಿಯಾ ಪಾಜ್‌ನ ಕೆಲವು ಕವಿತೆಗಳು ಹಾಗೂ ಗದ್ಯದ ಅನುವಾದಗಳನ್ನೊಳಗೊಂಡ 'ಅಕ್ಟೇವಿಯಾ ಪಾಜ್ ವಾಚಿಕೆ'ಯನ್ನು ಪ್ರಕಟಿಸಿದ್ದಾರೆ. ಓ.ಎಲ್. ನಾಗಭೂಷಣಸ್ವಾಮಿಯವರ ಪುಸ್ತಕ 'ಕನ್ನಡಕ್ಕೆ ಬಂದ ಕವಿತೆ'ಯಲ್ಲಿ ಅವನ ಕವಿತೆ ಅನುವಾದಗೊಂಡಿದೆ. ಶೋಭಾ ನಾಯಕ ಅವರು ಅನುವಾದಿಸಿರುವ ಕವನಗಳು 'ಅಕ್ಟಾವಿಯೋ ಪಾಜ್ ಕವಿತೆಗಳು' ಎನ್ನುವ ಹೆಸರಿನಲ್ಲಿ ಪ್ರಕಟಗೊಂಡಿವೆ.

'ದ ಪ್ಯಾರಿಸ್ ರಿವ್ಯೂ' ಪತ್ರಿಕೆಯ ಅಕ್ಟೋಬರ್ 1990ರ ಸಂಚಿಕೆಯಲ್ಲಿ ಪ್ರಕಟವಾದ ಸಂದರ್ಶನದ ಆಯ್ದ ಭಾಗಗಳನ್ನು ಇಲ್ಲಿ ಕೊಡಲಾಗಿದೆ.

◆ ಅಕ್ಟೇವಿಯಾ ನೀವು ಹುಟ್ಟಿದ್ದು 1914ರಲ್ಲಿ. ಅಂದರೆ, ಮೆಕ್ಸಿಕನ್ ಕ್ರಾಂತಿಯ ನಡುವೆ ಮತ್ತು ಮೊದಲನೆಯ ಮಹಾಯುದ್ಧ ಆರಂಭವಾಗುವ ಮುನ್ನಾ ದಿನದಂದು ಅಲ್ಲವೇ? ನೀವು ಬದುಕಿದ ಈ ಶತಮಾನ ಯುದ್ಧಗಳಲ್ಲೇ ಕಳೆದುಹೋಗಿದೆ. ಇಪ್ಪತ್ತನೆಯ ಶತಮಾನದ ಬಗ್ಗೆ ಹೇಳಲು ಏನಾದರೂ ಒಳ್ಳೆಯ ಸಂಗತಿಗಳಿವೆಯೇ?